

ಒತ್ತಾಯ. ಇದಕ್ಕೆ ಸಂಬಂಧಿಸಿದಂತೆ ಸಿಂಧಿ ಭಾಷೆಯ ವಾತಾವರಣ ಏನಿದೆ?

ಸಿಂಧಿ ಒಂದು ಶ್ರೀಮಂತ ಭಾಷೆ. ಇದರ ನಿಘಂಟುಗಳು ಸಾವಿರಾರು ಪುಟಗಳಲ್ಲಿ ಹರಡಿಕೊಂಡಿವೆ. ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಇಪ್ಪತ್ತು ಮಿಲಿಯನ್ ಜನ ಸಿಂಧಿ ಭಾಷೆಯಲ್ಲಿ ಮಾತಾಡ್ತಾರೆ. ಭಾರತದಲ್ಲೂ ಕೂಡ ಮಿಲಿಯಗಟ್ಟಲೆ ಸಿಂಧಿ ಭಾಷೆಯನ್ನಾಡುವ ಜನ ಇದ್ದಾರೆ. ಆದರೆ ಇವತ್ತು ಇಂಗ್ಲಿಷ್ ಮಾಧ್ಯಮ ಶಿಕ್ಷಣದ ಹುಚ್ಚಿಗೆ ಸಿಲುಕಿ ನಮ್ಮ ಸಿಂಧಿ ಮಾಧ್ಯಮದ ಶಾಲೆಗಳು ಆಂಗ್ಲ ಮಾಧ್ಯಮದ ಶಾಲೆಗಳಾಗಿ ಬದಲಾಗ್ತಾ ಇವೆ. ಸಿಂಧಿ ಮಾಧ್ಯಮದ ಶಾಲೆಗಳ ಹಾಗೆಯೇ, ಗುಜರಾತಿ ಮಾಧ್ಯಮದ ಶಾಲೆಗಳೂ ಇವತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳಾಗಿ ಪರಿವರ್ತನೆಯಾಗ್ತಾ ಇದ್ದಾವೆ. ಗುಜರಾತಿನ ಮಾತೃಭಾಷಾ ಪ್ರೇಮಿಗಳು 'ಗುಜರಾತಿ ಉಳಿಸಿ' ಎಂಬ ಆಂದೋಲನವನ್ನೇ ಆರಂಭಿಸಿದ್ದಾರೆ. ಇದೊಂದು ಬಗೆಯ ಎಚ್ಚರಿಕೆಯ ಗಂಟೆಯಾಗಿದೆ ನಮಗೆ.

ಕರ್ನಾಟಕದ ವಾತಾವರಣವೂ ಹೀಗೇ ನಿರಾಶಾದಾಯಕವಾಗಿರಬಹುದು ಅಂದ್ಕೊಳ್ತೀನಿ. 2014ರ ಸೆಪ್ಟೆಂಬರಿನಲ್ಲಿ ಕುವೆಂಪು ಭಾಷಾಭಾರತಿ ಪ್ರಾಧಿಕಾರವು ಬೆಂಗಳೂರಿನಲ್ಲಿ ಆಯೋಜಿಸಿದ್ದ 'ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಣದ ಮಾಧ್ಯಮ' ಎಂಬ ವಿಚಾರಸಂಕಿರಣದಲ್ಲಿ ಪಾಲ್ಗೊಂಡು ನಾನೊಂದು ಪ್ರಬಂಧ ಮಂಡಿಸಿದ್ದೆ. ಅಲ್ಲಿ ಮಂಡಿತವಾದ ಎಲ್ಲ ಪ್ರಬಂಧಗಳ ಪ್ರಕಾರ